ಓ. ಎಸ್. ನಂಃ 54-2008

ಡಿ. ಡಬ್ಲ್ಯೂಃ 1

ದಿಃ 13-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಜಿ ಎಸ್ ಎ ವಾದಿ ಪರ ವಕೀಲರಿಂದ.

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಬರೆಸಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ ಅದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ವಿರುದ್ಧ ಚನ್ನವೀರಗೌಡ, ಶಿವನಗೌಡ ಹಾಗೂ ಫಕ್ಕೀರಗೌಡ ಇವರು ದಾವೆಯನ್ನು ಸಲ್ಲಿಸಿರುತ್ತಾರೆ. ನನ್ನ ಹಾಗೂ ಮತ್ತೊಬ್ಬರ ಮೇಲೆ ವಾದಿಯರು ದಾವೆ ಸಲ್ಲಿಸಿರುತ್ತಾರೆ. ಸದರಿ ದಾವೆ ಯಾಕೆ ಮಾಡಿರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ವಾದಿಯರು ಸಿಂಗಾಪೂರ ಗ್ರಾಮದ ರಿ.ಸ.ನಂ. 71 ರ ಮೇಲೆ ದಾವೆಯನ್ನು ಸಲ್ಲಿಸಿರುತ್ತಾರೆ.

2. ವಾದಿಯರು ಹಾಗೂ ನಾವು ಬೇರೆ ಬೇರೆ ಘರಾಣೆದವರು ಇರುತ್ತೇವೆ ಎಂದರೆ ಸರಿ. ಚನ್ನವೀರಗೌಡ ಹಾಗೂ ಶಿವನಗೌಡ ಇವರ ತಂದೆಯ ಹೆಸರು ಕರಿಗೌಡ ಇರುತ್ತದೆ ಎಂದರೆ ಸರಿ. ಅದೇ ರೀತಿ 3 ನೇ ವಾದಿ ಫಕ್ಕೀರಗೌಡ ಇವರ ತಂದೆಯ ಹೆಸರು ಬಾನಪ್ಪಗೌಡ ಇರುತ್ತದೆ ಎಂದರೆ ಸರಿ. 4 ನೇ ವಾದಿಯ ಹೆಸರು ತಂದೆಯ ಹೆಸರು ಚಂದ್ರಗೌಡ ಇರುತ್ತದೆ ಎಂದರೆ ಸರಿ. ಚನ್ನಬಸನಗೌಡ ಇವರಿಗೆ ಇಬ್ಬರೂ ಸಹೋದರರು ಎಂದರೆ ಸರಿ. 1. ನಾಗನಗೌಡ ಹಾಗೂ 2. ಸೋಮನಗೌಡ ಎಂದರೆ ಸರಿ. ದಾವಾ ಆಸ್ತಿಯು ವಾದಿಯ ಘರಾಣೆದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಂದಾಯ ಇಲಾಖೆಯವರೊಂದಿಗೆ ವಿಲಾಫಿಯಾಗಿ ನನ್ನ ಹೆಸರನ್ನು ಖೊಟ್ಟಿ ರೀತಿಯಿಂದ ದಾಖಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಹಿಂದೆ ದಾವಾ ಆಸ್ತಿ ಹಿಸ್ಸೆಯಾಗಿದೆ ಎಂದು ಹೇಳಿ, ದಾವಾ ಆಸ್ತಿಗೆ ನನ್ನ ಹೆಸರು ದಾಖಲು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಉತಾರದಲ್ಲಿ ನನ್ನ ಹೆಸರು ಹೇಗೆ ಬಂದಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಹಿರಿಯರ ಕಾಲದಿಂದಲೂ ನಮ್ಮ ಹೆಸರು ನಮೂದು ಆಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳ ಕುರಿತು ಕಂದಾಯ ಅಧಿಕಾರ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿ.

ಈ ಹಂತದಲ್ಲಿ ವಾದಿ ಪರ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.